ಬರಗಾಲ ನಿಮಿತ್ತ ಶುಲ್ಕ ಏರಿಕೆ ಮಾಡುವುದಿಲ್ಲ ಎಂದು ಭರವಸೆ ನೀಡಿದ್ದ ಸರಕಾರ

# ವೈದ್ಯ ಸೀಟು ಶುಲ್ಕ ಹೆಚ್ಚಳ: ಪೋಷಕರಲ್ಲಿ ಕಳವಳ

**ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯದಲ್ಲಿ ಕಳೆದ ವರ್ಷ ಬರ ಇದ್ದುದರಿಂದ ಸಾಮಾನ್ಯ ಬಡ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ವೃತ್ತಿಪರ ಶಿಕ್ಷಣ ಕೋರ್ಸ್‌ಗಳ ಶುಲ್ಕ ಹೆಚ್ಚಿಸುವುದಿಲ್ಲ ಎಂದು ಭರವಸೆ ನೀಡುತ್ತಿದ್ದ ಸರಕಾರ, ಕೊನೆಗೂ ವೈದ್ಯ ಹಾಗೂ ದಂತ ವೈದ್ಯ ಕೋರ್ಸ್‌ಗಳ ಶುಲ್ಕವನ್ನು ಮೂರು ವರ್ಷಗಳ ಅವಧಿಗೆ ಪ್ರತಿ ವರ್ಷ ಶೇ 10ರಷ್ಟು ಹೆಚ್ಚಿಸಲು ಒಪ್ಪಿಗೆ ಸೂಚಿಸಿರುವುದು ವಿದ್ಯಾರ್ಥಿಗಳು ಹಾಗೂ ಪೋಷಕರ ಕಳವಳಕ್ಕೆ ಕಾರಣವಾಗಿದೆ.

"ನನ್ನ ಮಗಳು ಎಂಬಿಬಿಎಸ್ ಸೀಟಿನ ಆಕಾಂಕ್ಷಿ. ಆದರೆ, ಸರಕಾರಿ ಕೋಟಾದ ಸೀಟುಗಳ ಲಭ್ಯತೆ ಬಹಳಷ್ಟು ಕಡಿಮೆ ಇವೆ. ಇನ್ನು ದುಬಾರಿ ಶುಲ್ಕ ತೆತ್ತು ಆಡಳಿತ ಮಂಡಳಿ ಕೋಟಾದಡಿ ಸೀಟು ಪಡೆಯಲು ನಾವು ಶಕ್ತರಲ್ಲ. ಹೀಗಾಗಿ, ಸಾಮಾನ್ಯ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸರಕಾರ ಕ್ರಮ ಕೈಗೊಳ್ಳಬಹುದಿತ್ತು" ಎಂದು ವೈದ್ಯ ಸೀಟು ಆಕಾಂಕ್ಷಿ ವಿದ್ಯಾರ್ಥಿನಿಯೊಬ್ಬರ ಪೋಷಕ ಸಿ.ಎನ್. ನಂದೀಶ್ ಪ್ರತಿಕ್ರಿಯಿಸಿದ್ದಾರೆ.

ಈ ನಡುವೆ, ರಾಜ್ಯ ಸರಕಾರ ವೈದ್ಯ, ದಂತ ವೈದ್ಯ ಕೋರ್ಸ್‌ಗಳ ಶುಲ್ಕವನ್ನು ಮೂರು ವರ್ಷಗಳವರೆಗೆ ಪ್ರತಿ ವರ್ಷ ಶೇ 10ರಷ್ಟು ಹೆಚ್ಚಿಸಲು ಸಮ್ಮತಿ ಸೂಚಿಸಿದ್ದರೂ ಕರ್ನಾಟಕ ಧಾರ್ಮಿಕ ಹಾಗೂ ಭಾಷಾ ಅಲ್ಪಸಂಖ್ಯಾತ ವೃತ್ತಿಪರ ಕಾಲೇಜುಗಳ ಸಂಘ, ಶೇ 15ರಷ್ಟಿರುವ ಎನ್‌ಆರ್‌ಐ ಕೋಟಾದ ಸೀಟುಗಳನ್ನು ಶೇ 20ರಷ್ಟು ಭರ್ತಿ ಮಾಡಲು ಅನುಮತಿ ನೀಡಬೇಕೆಂಬ ಬೇಡಿಕೆ ಮುಂದಿಟ್ಟಿದೆ. ಅಲ್ಲದೆ, ಆಡಳಿತ ಮಂಡಳಿ ಕೋಟಾದ ಸೀಟುಗಳ ಭರ್ತಿಗೆ ತಾವೇ ಕೌನ್ಸೆಲಿಂಗ್ ನಡೆಸಲು ಅನುಮತಿ ನೀಡುವಂತೆ ಕೋರಿದೆ.

"ಸುಪ್ರೀಂಕೋರ್ಟ್‌ನಲ್ಲಿ ಜುಲೈ 17ರಂದು ಈ ಪ್ರಕರಣದ ವಿಚಾರಣೆ ನಡೆದು ತೀರ್ಪು ಹೊರ ಬೀಳಲಿದೆ. ನ್ಯಾಯಾಲಯದ ತೀರ್ಪು ನೋಡಿಕೊಂಡು ಮುಂದಿನ ತೀರ್ಮಾನ ಕೈಗೊಳ್ಳೋಣ ಎಂದು ಸರಕಾರ ಹೇಳಿದೆ. ಒಂದು ವೇಳೆ ನಮ್ಮ ಬೇಡಿಕೆಯನ್ನು ಸರಕಾರ ಒಪ್ಪದಿದ್ದಲ್ಲಿ ಶೇ 10ರಷ್ಟು ಶುಲ್ಕ ಹೆಚ್ಚಳ ಒಪ್ಪಲು ಸಾಧ್ಯವಿಲ್ಲ" ಎಂದು ಸಂಘದ ಕಾರ್ಯದರ್ಶಿ ಶಫಿ ಅಹ್ಮದ್ 'ವಿಕ'ಕ್ಕೆ ತಿಳಿಸಿದರು. ವೈದ್ಯ, ದಂತ ವೈದ್ಯ ಕೋರ್ಸ್‌ಗಳ ಟ್ಯೂಷನ್ ಶುಲ್ಕವನ್ನು ಶೇ 25ರಷ್ಟು ಹೆಚ್ಚಿಸಬೇಕೆಂಬುದು ಸಂಘದ ಬೇಡಿಕೆಯಾಗಿದೆ.

ರಾಜ್ಯದಲ್ಲಿ ಮೂರು ಅಲ್ಪಸಂಖ್ಯಾತ ವೈದ್ಯ ಕಾಲೇಜುಗಳಿದ್ದು, 350 ವೈದ್ಯ ಸೀಟುಗಳು ಲಭ್ಯವಿವೆ. ಹಾಗೆಯೇ, ಆರು ದಂತ ವೈದ್ಯ ಕಾಲೇಜುಗಳಲ್ಲಿ 300 ದಂತ ವೈದ್ಯ ಸೀಟುಗಳಿವೆ. ಈ ಪೈಕಿ 88 ವೈದ್ಯ ಹಾಗೂ 75 ದಂತ ವೈದ್ಯ ಸೀಟುಗಳು ಸರಕಾರಿ ಕೋಟಾದ ವ್ಯಾಪ್ತಿಗೆ ಬರಲಿವೆ.



**ಸರಕಾರಿ ಕೋಟಾದ ಸೀಟು ಶುಲ್ಕ**
(ರೂ.ಗಳಲ್ಲಿ)

| ವರ್ಷ | ವೈದ್ಯ | ದಂತವೈದ್ಯ |
|---|---|---|
| 2015 | 55,000 | 35,000 |
| 2016 | 70,000 | 45,000 |
| 2017 | 77,000 | 49,000 |

**ಕಾಮೆಡ್-ಕೆ ಕೋಟಾದ ಶುಲ್ಕ**

| ವರ್ಷ | ವೈದ್ಯ | ದಂತ ವೈದ್ಯ (ರೂ.ಗಳಲ್ಲಿ) |
|---|---|---|
| 2015 | 4.25 ಲಕ್ಷ | 2.75 ಲಕ್ಷ |
| 2016 | 5.75 ಲಕ್ಷ | 3.90 ಲಕ್ಷ |
| 2017 | 6.35 ಲಕ್ಷ | 4.29 ಲಕ್ಷ |

**ಸೀಟುಗಳ ಸ್ಥಿತಿಗತಿ**

ರಾಜ್ಯದಲ್ಲಿನ ವೈದ್ಯ ಕಾಲೇಜುಗಳ ಸಂಖ್ಯೆ: 50; ಸರಕಾರಿ ಕಾಲೇಜು ಸೀಟುಗಳು: 2,550; ಇಎಸ್‌ಐ: 200; ಅಲ್ಪಸಂಖ್ಯೇತರ: 2,015; ಅಲ್ಪಸಂಖ್ಯಾತ: 2,200; ಡೀಮ್ಡ್ ವಿವಿ: 1,630. ಒಟ್ಟು ಲಭ್ಯವಿರುವ ಸೀಟುಗಳು: 8,595.